ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೊಸಹಳ್ಳಿ ಗ್ರಾಮದವರಿಗೆ ಕುಡಿಯುವ ನೀರಿನ ಸೌಲಭ್ಯ

77. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ನಮಾಜ ವಿಕಾಸ ಹಾಗೂ ನಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೊಸಹಳ್ಳಿ ಗ್ರಾಮದವರಿಗೆ ಕುಡಿಯಲು ನೀರು ಸಾಕಾದಷ್ಟಿಲ್ಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ನಮಾಜ ವಿಕಾಸ ಹಾಗೂ ನಮಾಜ ಕಲ್ಯಾಣ ಮಂತ್ರಿಗಳು).—

(ಅ) ಪುನಶ್ಚ ಗ್ರಾಮದಲ್ಲಿ ಕುಡಿಯಲು ನೀರು ಸಾಕಾದಷ್ಟು ಸರಬರಾಜು ಇರುವುದಾಗಿ ತಿಳಿಯ ಬಂದಿದೆ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡಿಗೆರೆ ತಾಲ್ಲೂಕು ಹರಿಜನ ಕೇರಿಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲದಿರುವುದು

78. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ನಮಾನ ವಿಕಾಸ ಹಾಗೂ ನಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಈ ಕೆಳಗೆ ನಮೂದಿಸಿರುವ ಗ್ರಾಮಗಳ ಹರಿಜನ ಕೇರಿಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(1) ಹ್ಯಾರಗುಡ್ಡೆ, ಮೂಡಿಗೆರೆ ತಾಲ್ಲೂಕು
(2) ಪಟ್ವದೂರು ,,
(3) ಮೇಕನಗದ್ದೆ ,,
(4) ಹೊರಟ್ಟಿ ,,

(ಆ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ನಮಾಜ ವಿಕಾಸ ಹಾಗೂ ನಮಾಜ ಕಲ್ಯಾಣ ಮಂತ್ರಿಗಳು).—

(ಅ) ಹೊರಟ್ಟಿ ಗ್ರಾಮದ ಹರಿಜನ ಕೇರಿಯಲ್ಲಿ ಕುಡಿಯುವ ನೀರಿನ ಬಾವಿ ಇರುತ್ತದೆ : ಉಳಿದ ಮೂರು ಕೇರಿಗಳಲ್ಲಿ ಇರುವುದಿಲ್ಲ.

(ಆ) ಬಾವಿಗಳಿಲ್ಲದ ಮೂರು ಗ್ರಾಮಗಳ ಹರಿಜನ ಕೇರಿಯಲ್ಲೂ ಬಾವಿ ಕೆಲಸ ಕೈಗೊಂಡಿದೆ; ಕೆಲಸ ಜರೂರಾಗಿ ನಡೆಯುತ್ತಿದೆ.